ಹೇಳ್ಬೇಕು. ದಯವಿಟ್ಟು... ಈ ಸಂಜೆ ನನ್ನ ಜೊತೆ ಡಿನ್ನರ್‌ಗೆ ಬರ್ತೀರಾ. ಸರಿಯಾಗಿ ಏಳು ಗಂಟೆಗೆ ವಿಂಡ್ಸರ್‌ಮ್ಯಾನರ್‌ನಲ್ಲಿ ಕಾಯ್ತಿರ್ತೀನಿ" ಎಂದ.

ನನ್ನ ತಲೆಗೇರಿದ್ದ ಸಿಟ್ಟು ನಾಲಿಗೆಗೂ ಹರಿಯಿತು. "ನೋ ಚಾನ್ಸ್. ನಿಮ್ಮಂಥ ಲೂಸ್ ಜೊತೆ ನಾನ್ಯಾವ ಡಿನ್ನರಿಗೂ ಬರಲ್ಲ. ಡೂ ಯೂ ಥಿಂಕ್ ಐ ಆಮ್ ಎ ಫೂಲ್. ಯೂ ಹ್ಯಾವ್ ಟೇಕನ್ ಮೀ ಫಾರ್ ಎ ರೈಡ್, ರೀ ಮಿಸ್ಟರ್ ಇನ್ನೊಂದು ಸಾರಿ ಫೋನ್ ಮಾಡಲೂ ಬೇಡಿ. ನಿಮಗೆ ಟೈಮ್ ಕೊಡೋಷ್ಟು ನಂಗೆ ಟೈಮೂ ಇಲ್ಲ" ಎಂದೆ.

"ಪ್ಲೀಸ್ ಫೋನಿಡಬೇಡಿ. ನೀವು ಹೀಗೆ ಮಾಡ್ತಿರೋದು ನಂಗೇನೂ ಬೇಜಾರಿಲ್ಲ. ಇನ್‌ಫ್ಯಾಕ್ಟ್ ನಾನಿದನ್ನು ಎಕ್ಸ್‌ಪೆಕ್ಟ್ ಮಾಡಿದ್ದೆ. ಆದ್ರೆ ನಾನು ಒಂದು ಹುಡುಗೀನ ಇಷ್ಟ ಪಟ್ಟಿದೀನಿ. ಅವಳೂ ನೀವು ತೋರಿಸಿದವಳೇ. ನಮ್ಮಿಬ್ರಿಗೂ ಸ್ವಲ್ಪ ಡಿಫರೆನ್ಸ್‌ಗಳಿವೆ. ನೀವೊಂಚೂರು ಇಂಟರ್‌ಫಿಯರಾದ್ರೆ ಎಲ್ಲಾ ಸರೋಗುತ್ತೆ. ಪ್ಲೀಸ್ ಸಂಜೆ ಏಳೂವರೆಗೆ ವಿಂಡ್ಸರ್‌ಮ್ಯಾನರ್‌ನಲ್ಲಿ... ಮರೀಬೇಡಿ" ಎಂದು ಫೋನ್ ಕಟ್ ಮಾಡಿಯೇ ಬಿಟ್ಟ. ನಾನು ತತ್‌ಕ್ಷಣ ಫೋನ್ ಮಾಡಿ ಬರುವುದಿಲ್ಲವೆಂದು ಖಡಾಖಂಡಿತವಾಗಿ ಹೇಳೋಣವೆಂದು ಗುಂಡಿಯದುಮಿದರೆ 'ಸ್ವಿಚ್‌ಆಫ್' ಬಂತು. ಥತ್! ನಾನ್ಸೆನ್ಸ್! ನಾನು ಹೋಗುವುದೇನೂ ಅಗತ್ಯವಿಲ್ಲವೆಂದ ಮೇಲೆ ಹೇಳುವ ಅಗತ್ಯವಾದರೂ ಏನು ಎಂದುಕೊಂಡೆ. ನಾನು ಪರಿಚಯಿಸಿದ ಹುಡುಗಿಯ ಜೊತೆ ನೆಗೋಸಿಯೇಟ್ ಮಾಡಲು ಕರೆದನೆಂದ ಮೇಲೆ ಹೋಗಬೇಕಾಗುತ್ತದೆ ಎನಿಸಿತು. ಅವನು ರಿಜಿಸ್ಟ್ರೇಷನ್ನಿಗೆ ಟ್ರಾನ್ಸ್‌ಫರ್ ಮಾಡಿದ್ದ ಮೂರು ಸಾವಿರ ರೂಪಾಯಿಯೂ ನನ್ನನ್ನು ಗಿಲ್ಟ್‌ನಲ್ಲಿ ದೂಡಿತು. ಹೋಗುವುದೇ ಸರಿಯೆನಿಸಿತು. ನಾನು ಪರಿಚಯಿಸಿದ ಹುಡುಗಿಯೆಂದರೆ... ನಾನವನಿಗೆ ಆರು ಹುಡುಗಿಯರ ಪ್ರೊಫೈಲ್ ಕಳಿಸಿದ್ದೆ. ಫೋಟೊ ಸಮೇತ ಅವನ ಮೇಲ್ ಐಡಿಗೆ ರವಾನಿಸಿದ್ದೆ. ಅದರಲ್ಲಿ ಯಾರಿರಬಹುದು? ಆರತಿ, ಪ್ರತಿಮಾ, ಮೇಘಾ... ಅಥವಾ? ನಾನವರ ಕುರಿತು ಹೇಳಿದಾಗ ಯಾವ ಆಸಕ್ತಿ ತೋರಿಸದವನು ಈಗ ಯಾವ ಹುಡುಗಿಯ ಕುರಿತು ನನ್ನ ನೆಗೋಸಿಯೇಷನ್ ಕೇಳುತ್ತಿದ್ದಾನೆ? ಸರಿ ಒಂದು ಕೆಲಸ ಮಾಡಬಹುದು. ಆ ಹುಡುಗಿಯನ್ನೂ ಅಲ್ಲಿಗೇ ಬರಹೇಳು. ನಿಮ್ಮಿಬ್ಬರನ್ನು ಎದುರೆದುರು ಕೂರಿಸಿ ಮುಖಾಮುಖಿ ಮಾತಾಡಿಸಿದರೆ ಏನೇ ಡಿಫರೆನ್ಸ್‌ಗಳಿದ್ದರೂ ಬಗೆಹರಿಸಬಹುದು. ಅವನೀಗ ಫೋನ್ ಆಫ್ ಮಾಡಿಟ್ಟಿದ್ದಾನೆ. ಆನ್ ಆಗಿದ್ದರೂ ಎತ್ತುಕೊಳ್ಳುವ ನಿರೀಕ್ಷೆಯಿಲ್ಲ. ಒಂದು ಮೆಸೇಜು ಟೈಪ್ ಮಾಡಿ ಕಳಿಸಿ ಬಿಟ್ಟರೆ ಸಾಕು. ಅದೇ ಸರಿ ಎನ್ನಿಸಿ ಆ ಹುಡುಗಿಯನ್ನು ಅಲ್ಲಿಗೆ ಬರಹೇಳು ಎಂಬ ಒಂದು ಎಸ್ಸೆಮ್ಮೆಸ್ಸು ಕಳಿಸಿದೆ. "ಓಕೆ ಶ್ಯೂರ್. ಅವಳಿಗೂ ಅಲ್ಲಿಗೆ ಬರಹೇಳಿರುವೆ. ನೀವು ಬಂದರೆ ಅವಳೂ ಬರುತ್ತೇನೆಂದಳು. ನೀವು ಬಂದರೆ ಅವಳು ಬಂದಂತೆಯೇ" ಎಂದು ಮರು ಸಂದೇಶ ಕಳುಹಿಸಿದ.

ನಾನಲ್ಲಿ ಹೋಗುವ ಮೊದಲೇ ಅವನಲ್ಲಿ ಕಾದಿದ್ದು 'ಪ್ಲೀಸ್ ಕಮ್' ಎಂದು ನಾಟಕೀಯವಾಗಿ ನನ್ನನ್ನು ಅವನು ಕಾದಿರಿಸಿದ್ದ ಟೇಬಲ್ಲಿಗೆ ಕರೆದೊಯ್ದ. ಸುತ್ತಲೂ ಕಣ್ಣಾಡಿಸಿ "ಅವಳೆಲ್ಲಿ? ಇಷ್ಟಕ್ಕೂ ಯಾರವಳು?" ಎಂದೆ. ಒಂದು ಹಗುರಾದ ನಗೆ ನಕ್ಕು "ಅವಳಾಗಲೇ ಬಂದಿದ್ದಾಳೆ. ಇಲ್ಲೇ ಹೋಗಿದ್ದಾಳೆ. ಹೆಚ್ಚೆಂದರೆ ಇನ್ನು ಹದಿನೈದು ನಿಮಿಷದಲ್ಲಿ ಇಲ್ಲಿರುತ್ತಾಳೆ. ನೀವು ಕಂಫರ್ಟಬಲ್ ಆಗಿ ಫೀಲ್ ಮಾಡಿ" ಎನ್ನುತ್ತಾ ಮೆನುಕಾರ್ಡನ್ನು ನನ್ನತ್ತ ತಳ್ಳಿದ. ನಾನು ಅದನ್ನು ಗಮನಿಸದೆ "ಅದು ಸರಿ ನೀವೇನೋ ಹೇಳಿದ್ರಲ್ಲ. ನಿಮ್ಮ ವಿಷಯ ತಪ್ಪು ಮಾಹಿತಿ ಕೊಟ್ಟಿದ್ದೀನಿ ಅಂತ... ಅದೇನು ಹೇಳಿ. ಆ ಹುಡುಗಿಗೆ ಹೇಳುವಾಗ ನಿಮ್ಮ ಕುರಿತು ನನಗೆ ಸರಿಯಾಗಿ ಗೊತ್ತಿರಬೇಕಲ್ಲವಾ?" ಎಂದೆ. ಅವನು ಉಡಾಫೆಯಿಂದ "ಸಾವಿರ ಸುಳ್ಳು ಹೇಳಿ ಒಂದು ಮದ್ವೆ